**1** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ **95/2024**</u>

| | | |
|---|---|---|
| ಸಾಕ್ಷಿದಾರರ ಹೆಸರು | - ಜಯಸಿಂಗ್ ನಾಯ್ಕ | ಪಿಡಬ್ಲೂ - 06 |
| ತಂದೆಯ ಹೆಸರು | - ರಂಗಸ್ವಾಮಿ ನಾಯ್ಕ | ಸಿಡಬ್ಲೂ - 14 |
| ವಯಸ್ಸು | - 61 ವರ್ಷ | |
| ಉದ್ಯೋಗ | - ನಿವೃತ್ತ ಸಹಾಯಕ ಇಂಜಿನಿಯರ್ | |
| ವಾಸ ಸ್ಥಳ | - ಚಿಕ್ಕಮಗಳೂರು | |

*(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನು ಈ ದಿನ* ***Google meet*** *ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು.)*

ದಿನಾಂಕಃ 20-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಃ</u>

1. ನಾನು 2020 ರಿಂದ ಫೆಬ್ರವರಿ 2025 ರವರೆಗೆ ಸಹಾಯಕ ಇಂಜಿನಿಯರ್ ಆಗಿ ಚಿಕ್ಕಮಗಳೂರು ಲೋಕೋಪಯೋಗಿ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕಃ 13-05-2024 ರಂದು ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರವರು ನಮ್ಮ ಲೋಕೋಪಯೋಗಿ ಇಲಾಖೆಗೆ ಮನವಿಯನ್ನು ಸಲ್ಲಿಸಿ ನಗರ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ 77/2024 ಕ್ಕೆ ಸಂಬಂಧಿಸಿದಂತೆ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು

ತಯಾರಿಸಿಕೊಡುವಂತೆ ಕೋರಿದ್ದರು.

3. ಸದರಿ ಮನವಿಯು ಅದೇ ದಿನ ನಮ್ಮ ಕಛೇರಿಯಲ್ಲಿ ಸ್ವೀಕೃತಗೊಂಡಿರುತ್ತದೆ. ಸದರಿ ಮನವಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ಮನವಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ.15 ಎಂದು ಗುರುತಿಸಲಾಯಿತು.

4. ಸದರಿ ಮನವಿಯ ಮೇರೆಗೆ ದಿನಾಂಕಃ 27-05-2024 ರಂದು ನಗರ ಪೊಲೀಸ್ ಠಾಣೆಯ ಎ.ಎಸ್.ಐ. ಆದ ಚಾಸಾ.30 ಸಿ.ಆರ್.ರಮೇಶಪ್ಪರವರು ನನ್ನನ್ನು ಚಿಕ್ಕಮಗಳೂರಿನ ಐ.ಜಿ. ರಸ್ತೆಯಲ್ಲಿರುವ ಸುಪ್ರೀಂ ಮೆಡಿಕಲ್ಸ್ ಮತ್ತು ಶ್ರೀ ಭಾರತ ಮಾತ ಕಾಫಿ ವರ್ಕ್ಸ್ ಮುಂಭಾಗ ಫುಟಪಾತ್ ರಸ್ತೆಗೆ ಕರೆದುಕೊಂಡು ಹೋಗಿ ಅಲ್ಲಿ ಕೃತ್ಯ ನಡೆದ ಸ್ಥಳವನ್ನು ತೋರಿಸಿದ ಮೇರೆಗೆ ನಾನು ಸ್ಥಳದಲ್ಲಿಯೇ ನಕಾಶೆಯನ್ನು ತಯಾರಿಸಿದೆನು. ನಂತರ ಕಛೇರಿಗೆ ಹಿಂದಿರುಗಿ ಸದರಿ ನಕ್ಷೆಯಲ್ಲಿ ಪ್ರಕರಣದ ಸಂಖ್ಯೆ ಇತ್ಯಾದಿ ವಿವರಗಳನ್ನು ನಮೂದಿಸಿ ನಮ್ಮ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರವರಿಗೆ ನೀಡಿದ್ದು, ಅವರು ಅದನ್ನು ತಮ್ಮ ಪತ್ರದ ಮುಖಾಂತರ ಸಂಬಂಧಿಸಿದ ಪೊಲೀಸರಿಗೆ ದಿನಾಂಕಃ 29-05-2024 ರಂದು ನೀಡಿರುತ್ತಾರೆ. ಸದರಿ ದಾಖಲೆಗಳನ್ನು ಪೊಲೀಸರು ದಿಃ 06-07-2024 ರಂದು ಸ್ವೀಕರಿಸಿರುತ್ತಾರೆ. ಸದರಿ ನಕ್ಷೆ ಮತ್ತು ಪತ್ರವನ್ನು ನೋಡುತ್ತಿದ್ದು, ಅವುಗಳನ್ನು ಕ್ರಮವಾಗಿ ನಿಪಿ.16 ಮತ್ತು ಪಿ.17 ಎಂದು ಗುರುತಿಸಲಾಯಿತು. ನಿಪಿ.16 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.16(ಎ) ಎಂದು ಗುರುತಿಸಲಾಯಿತು.

5. ಸಾಕ್ಷಿಗೆ ಈಗಾಗಲೇ ನಿಪಿ.6, ಪಿ.12 ಮತ್ತು ಪಿ.13 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳನ್ನು ತೋರಿಸಲಾಗಿ ಸಾಕ್ಷಿಯು

ಅವುಗಳಲ್ಲಿ ನಾನು ಮೇಲೆ ಹೇಳಿದಂತೆ ನಕ್ಷೆಯನ್ನು ತಯಾರಿಸಿದ ಸ್ಥಳ ಕಂಡು ಬರುವುದಾಗಿ ನುಡಿದಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿಯ ಪರವಾಗಿಃ **LADCS** ನ **Deputy Chief Defense counsel** ಆದ ಶ್ರೀ ಎನ್ ಡಿ ವಕೀಲರಿಂದಃ</u>

6. ನೀವು ನಿಪಿ.16 ರಲ್ಲಿ ರಸ್ತೆ ಮಧ್ಯದಲ್ಲಿದ್ದ ವಿಭಜಕವನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. ಶವ ಬಿದ್ದಿತ್ತು ಎನ್ನಲಾದ ಸ್ಥಳವನ್ನು ನೀವು ನಿಪಿ.16 ರಲ್ಲಿ ನಿಖರವಾಗಿ ತೋರಿಸಿಲ್ಲ ಎಂದರೆ ಸರಿಯಲ್ಲ. ನೀವು ನಿಪಿ.16 ರಲ್ಲಿ ಫುಟಪಾತಿನ ಎಡ್ಜನಲ್ಲಿ ಕೃತ್ಯ ನಡೆದಿದೆ ಎನ್ನಲಾದ ಸ್ಥಳವನ್ನು ತೋರಿಸಿರುವುದು ಕಂಡುಬರುತ್ತದೆ ಎಂದರೆ ಸಾಕ್ಷಿ ಪೊಲೀಸರು ತೋರಿಸಿದ ಸ್ಥಳವನ್ನು ನಾನು ಕೃತ್ಯ ನಡೆದ ಸ್ಥಳ ಎಂದು ನಮೂದು ಮಾಡಿದ್ದೇನೆ ಎನ್ನುತ್ತಾರೆ. ರಸ್ತೆಯು ಟಾರ್ ರಸ್ತೆಯಾಗಿದ್ದು, ಅದು ಇಳಿಜಾರಿನಿಂದ ಕೂಡಿರಲಿಲ್ಲ. ನಿಪಿ.16 ರಲ್ಲಿ ಅದನ್ನು ನೀವು ನಮೂದಿಸಿಲ್ಲ ಎಂದರೆ ಸಾಕ್ಷಿ ಅದು ಟಾರ್ ರಸ್ತೆ ಎಂದು ತೋರಿಸಿದ್ದೇನೆ ಎನ್ನುತ್ತಾರೆ.

7. ನಿಪಿ.16 ರಲ್ಲಿ ನೀವು ಸುಪ್ರೀಂ ಮೆಡಿಕಲ್ಸ್ ಎಲ್ಲಿ ಬರುತ್ತದೆ ಎಂದು ನಮೂದಿಸಿಲ್ಲ ಎಂದರೆ ಸರಿ. ಸ್ಥಳದ ಸುತ್ತಮುತ್ತ ಸಿಸಿ ಕ್ಯಾಮೆರಗಳನ್ನು ಅಳವಡಿಸಿದ ಬಗ್ಗೆ ನಕ್ಷೆಯಲ್ಲಿ ನಮೂದಿಸಿಲ್ಲ ಎಂದರೆ ಸಾಕ್ಷಿ ಪೊಲೀಸರು ತೋರಿಸಿದ ಸ್ಥಳದ ನಕಾಶೆಯನ್ನು ಮಾತ್ರ ತಯಾರಿಸಿದ್ದೇನೆ ಎನ್ನುತ್ತಾರೆ. ನಾನು ಸ್ಥಳದಲ್ಲಿ ಪ್ರತ್ಯೇಕವಾಗಿ ಕಚ್ಚಾ ನಕ್ಷೆಯನ್ನು ತಯಾರಿಸಿರಲಿಲ್ಲ.

8. ನೀವು ದಿಃ 27-05-2024 ರಂದು ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೆ ಭೇಟಿ ನೀಡಿದ್ದಾಗಿ, ಸ್ಥಳದಲ್ಲಿಯೇ ನೀವು ನಿಪಿ.16 ನಕ್ಷೆಯನ್ನು ತಯಾರಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನೀವು

ಹೇಳಿದಂತೆ ಚಾಸಾ.30 ರವರು ಯಾವುದೇ ಸ್ಥಳವನ್ನು ತೋರಿಸಿಲ್ಲ ಮತ್ತು ನೀವು ಅವರೊಂದಿಗೆ ಯಾವುದೇ ಸ್ಥಳಕ್ಕೆ ಭೇಟಿ ನೀಡದೇ ಇದ್ದರೂ ಸಹ ಕಚೇರಿಯಲ್ಲಿಯೇ ಕುಳಿತು ಪೊಲೀಸರಿಗೆ ಸಹಾಯವಾಗುವಂತೆ ನಿಪಿ.16 ನಕ್ಷೆಯನ್ನು ತಯಾರಿಸಿ ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ